ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
ಆರ್.ಪಿ.ಸಂಖ್ಯೆ.57
ನಮೂನೆ ಸಂಖ್ಯೆ.4
(ಸಿವಿಲ್ )

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಬಳ್ಳಾಪುರ.**

**ಎಸ್.ಸಿ. ಸಂಖ್ಯೆ: 77/2020**

| | |
|---|---|
| PW | 25 |
| CW | 34 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **14.10.2022**

ಸಾಕ್ಷಿಯ ಹೆಸರು : ಪ್ರವೀಣ್ ಕುಮಾರ್ . ಎಸ್
ತಂದೆಯ/ಗಂಡನ ಹೆಸರು : ಸಿದ್ದಲಿಂಗಶೆಟ್ಟಿ
ವಯಸ್ಸು : 42 ವರ್ಷ
ಉದ್ಯೋಗ : ಮುಖ್ಯಪೇದೆ
ವಾಸಸ್ಥಳ : ಚಿಕ್ಕಬಳ್ಳಾಪುರ

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

ನಾನು 2019 ರಿಂದ ಇಲ್ಲಿಯ ರವರೆಗೆ ಪುರ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**1.** ದಿಃ 18.08.2020 ರಂದು ಚಾಸಾ - 39 ರವರು ಕೃತ್ಯ ನಡೆದ ಸ್ಥಳವಾದ ಪ್ರಶಾಂತ್ ನಗರದ ಸೋಮಶೇಖರ್ ಬಿನ್ ವೆಂಕಟರವಣಪ್ಪರವರ ಮನೆಯ ಮೇಲ್ಭಾಗದ ಲ್ಲಿ ನ್ಯಾಯಾಲಯದಲ್ಲಿ ಅಟೆಂಡರ್ ಅಗಿದ್ದ ನವೀನ್ ಕೊಲೆಯಾಗಿದ್ದ ರೂಮಿನಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿದ್ದು , ಸದರಿ ಪಂಚನಾಮೆಯನ್ನು ನನ್ನ ಬರವಣಿಗೆಯಲ್ಲಿ ಬರೆದಿರುತ್ತೇನೆ. ಪಂಚನಾಮೆ ಕಾಲದಲ್ಲಿ ಮೃತನ ಬಾಯಿಯಿಂದ ಹೊರಬಂದಿದ್ದ ರಕ್ತವನ್ನು ಹತ್ತಿಯಿಂದ ಮತ್ತು ನೆಲದ ಮೇಲೆ ಬಿದ್ದಿದ್ದ ಹತ್ತಿಯಿಂದ ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬಗಳಲ್ಲಿ ಇಟ್ಟು , ಮೃತನ ದೇಹದ ಪಕ್ಕದಲ್ಲಿ ಬಿದ್ದಿದ್ದ ರಕ್ತ ಕಲೆಯಾಗಿದ್ದ ಪ್ಲಾಸ್ಟಿಕ್ ಕವರ್ ನ್ನು ಒಂದುಪ್ಲಾಸ್ಟಿಕ್ ಡಬ್ಬದಲ್ಲಿ ಇಟ್ಟು ಅವುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಚೀಲದಲ್ಲಿ ಇಟ್ಟು ಅರಗು ಮಾಡಿ ಸಿ ಎಂಬ ಅಕ್ಷರದಿಂದ ಮೊಹರು ಮಾಡಿ ಪಂಚರಾದ

PW: 25 CW: 34

ಚಾಸಾ - 1 ರಿಂದ 3 ರವರ ಸಮಕ್ಷಮ ಮಹಜರು ಮೂಲಕ ವಶಪಡಿಸಿಕೊಂಡು ಸದರಿ ಡಬ್ಬಗಳಿಗೆ ಸಾಕ್ಷಿದಾರರ ಸಹಿ ಇರುವ ಚೀಟಿಗಳನುನ ಅಂಟಿಸಿರುತ್ತೇನೆ. ಮೃತನ ಕುತ್ತಿಗೆ ಮೇಲೆ ಇದ್ದ ಕ್ರೀಮ್ ಬಣ್ಣದ ಶರ್ಟ್ , ಕಪ್ಪು ಬಣ್ಣದ ಬೆಲ್ಟ್ , ಬೆಲ್ಟ್ ಹೊಂದಿಕೊಂಡಿದ್ದ ಜೀನ್ಸ್ ಪ್ಯಾಂಟ್ ನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಇಟ್ಟು ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮೃತನ ಎಡಬದಿಯಲ್ಲಿ ಇದ್ದ ಎಂ. ಐ ಕಂಪನಿಯ ಟಚ್ ಸ್ಕ್ರೀನ್ ಮೊಬೈಲ್ ಫೋನ್ ನನ್ನು ಮತ್ತು ಮೃತ ದೇಹದ ಬಲಭಾಗದಲ್ಲಿ ಇದ್ದ ಕಬ್ಬಿಣದ ಟೇಬಲ್ ಮೇಲೆ ಇರುವ ಬೆಡ್ ಶೀಟಿನ ಕೆಳಗಡೆ ಇದ್ದ ಸ್ಯಾಮ್ ಸಾಂಗ್ ಕೀ ಪ್ಯಾಡ್ ಮೊಬೈಲ್ ನ್ನು ಬಿಳಿ ಬಟ್ಟೆ ಚೀಲದಲ್ಲಿ ಇಟ್ಟು ದಾರದಿಂದ ಹೊಲಿದು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಕ್ರೀಮ್ ಬಣ್ಣದ ತಲೆದಿಂಬು , ನೀಲಿ ಕಾಪಿ ಮಿಶ್ರಿತ ಬಣ್ಣದ ಇನ್ನೊಂದು ಪಡೆದು ಬಿಳಿ ಬಟ್ಟೆ ಚೀಲದಲ್ಲಿ ಇಟ್ಟು ದಾರದಿಂದ ಹೊಲಿದು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಅವುಗಳಿಗೆ ಕ್ರಮ ಸಂಖ್ಯೆ 1 ರಿಂದ 10 ಎಂದು ನೀಡಿರುತ್ತೇವೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ -2 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ - 2 (ಡಿ ) ಎಂದು ಗುರುತಿಸಲಾಯಿತು.

2) ಮೃತನ ಬಾಯಿಯಿಂದ ಪಡೆದ ರಕ್ತದ ಮಾದರಿ ಹತ್ತಿಯನ್ನು ಎಂ. ಒ - 11 ಎಂದು , ಮೃತನ ಪಕ್ಕದಲ್ಲಿ ಬಿದ್ದಿದ್ದ ರಕ್ತ ಸಂಗ್ರಹಿಸಿದ ಹತ್ತಿಯನ್ನು ಎಂ.ಒ - 12 , ಪ್ಲಾಸ್ಟಿಕ್ ಕವರ್ ನ್ನು ಎಂ. ಒ – 13 ಎಂದು ಗುರುತಿಸಲಾಯಿತು. ಕ್ರೀಮ್ ಕಲರ್ ಶರ್ಟ್ ನ್ನು ಈಗಾಗಲೇ ಎಂ. ಒ - 5 ಎಂದು , ಜೀನ್ಸ್ ಪ್ಯಾಂಟ್ ನ್ನು ಎಂ. ಒ - 3 ಎಂದು, ಬೆಲ್ಟ್ ನ್ನು ಎಂ. ಒ - 8 ಎಂದು , ತಲೆದಿಂಬುಗಳ ಕವರ್ ಗಳನ್ನು ಎಂ. ಒ - 1 ಮತ್ತು 2 ಎಂದು , ಮೊಬೈಲ್ ಗಳನ್ನು ಎಂ. ಒ -6 ಮತ್ತು 7 ಎಂದು ಗುರುತಿಸಲಾಗಿದೆ. ಈ ಪಂಚನಾಮೆಯನ್ನು ಮ. 3.30 ರಿಂದ 5.00 ಗಂಟೆಯವರೆಗೆ ಮಾಡಲಾಯಿತು. ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ತೆಗೆಯಲಾಯಿತು. ಅವುಗಳನ್ನು ಈಗಾಗಲೇ ನಿಪಿ -5 ಮತ್ತು 6 ಎಂದು ಗುರುತಿಸಲಾಗಿದೆ. ಅದೇ ಸಮಯದಲ್ಲಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ.

PW: 25 CW: 34

3) ದಿಃ 14.09.2020 ರಂದು ಚಾಸಾ - 40 ರವರು ಆರೋಪಿ 1 ನವೀನ್ ಕುಮಾರ್ ರವರು ವಾಸವಿದ್ದ ಬೆಂಗಳೂರಿನ ಕಟ್ಟಿಗೇನಹಳ್ಳಿ ಗ್ರಾಮದ ರಾಮಯ್ಯ ಬಿನ್ ನಂಜಪ್ಪ ರವರ ಮನೆಯ ಮೂರನೇ ಹಂತಸ್ತಿನಲ್ಲಿರುವ ನವೀನ್ ಕುಮಾರ್ ವಾಸವಿದ್ದ ಬಾಡಿಗೆ ಮನೆಯಲ್ಲಿ ಪಂಚರಾದ ಚಾಸಾ - 16 , 17 ಮತ್ತು 18 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಆರೋಪಿಯು ತಾನು ನ್ಯಾಯಾಲಯದಲ್ಲಿ ಅಟೆಂಡರ್ ಅಗಿರುವ ದೀಪಾ ಎನ್ನುವ ಜೊತೆ ಅಕ್ರಮ ಸಂಬಂಧ ಹೊಂದಿದ್ದು ಆಕೆಯನ್ನು ಅದೇ ನ್ಯಾಯಾಲಯದ ಅಟೆಂಡರ್ ಅಗಿದ್ದ ನವೀನ್ ರವರು ದೈಹಿಕ ಸಂಬಂಧ ಹೊಂದಿರುವ ಬಗ್ಗೆ ಪ್ರಶ್ನೆ ಮಾಡಿದಾಗ ಅತನು ತನಗೆ ಅವಮಾಸಿದ್ದು , ಅದನ್ನು ಮರೆಯಲಾಗದೇ ಅತನನ್ನು ನನ್ನ ಕಕ್ಷಿದಾರರಾದ ಕೃಷ್ಣಮೂರ್ತಿ ಮತ್ತು ಅತನ ಭಾವ ಮೈದುನನಾದ ಅನಿಲ್ ಕುಮಾರ್ ರವರಿಂದ ಕೊಲೆ ಮಾಡಿಸಲು ಮಾತನಾಡಲು ಉಪಯೋಗಿಸಿದ್ದ ಮೊಬೈಲ್ ಫೋನ್ ನನ್ನು ಹಾಜರುಪಡಿಸಿರುವುದಾಗಿ ತಿಳಿಸಿ ಒಂದು ಸ್ಯಾಮ್ ಸಾಂಗ್ ಮೊಬೈಲ್ ಫೋನ್ ಮತ್ತು 9108480555 ಸಂಖ್ಯೆಯ ಎರ್ ಟೆಲ್ ಸಿಮ್ ನ್ನು ಹಾಜರು ಪಡಿಸಿದ್ದು ಅವುಗಳನ್ನು ಪಂಚರು ಸಮಕ್ಷಮ ವಶಕ್ಕೆ ಪಡೆದು ಬಿಳಿ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಸಿ ಎಂಬ ಅಕ್ಷರದಿಂದ ಮೊಹರು ಮಾಡಲಾಯಿತು. ಆರೋಪಿ ಮುಂದುವರೆದು ನಾನು ನವೀನ್ ರವರನ್ನು ವಾಸದ ಮನೆಯನ್ನು ತೋರಿಸಲು ಉಪಯೋಗಿಸಿರುವ ದ್ವಿಚಕ್ರ ವಾಹನ ಮನೆಯ ಕೆಳಭಾಗದಲ್ಲಿ ಇರುವುದಾಗಿ ತಿಳಿಸಿ , ಪಂಚರು ಮತ್ತು ನಮ್ಮನ್ನು ಕೆಳಭಾಗಕ್ಕೆ ಕರೆದುಕೊಂಡು ಹೋದನು. ಕೆಳಭಾಗದಲ್ಲಿ ಇದ್ದ ಕೆಎ - 40 - ಎಸ್ - 7758 ಸಂಖ್ಯೆಯ ಹಿರೋ ಇಗ್ ನೇಟರ್ ದ್ವಿಚಕ್ರ ವಾಹನವನ್ನು ಹಾಜರುಪಡಿಸಿದ್ದು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಯಿತು. ಆರೋಪಿ ಮುಂದುವರೆದು ನವೀನ್ ನನ್ನು ಕೊಲೆ ಮಾಡಿಸಲು ಕೃಷ್ಣಮೂರ್ತಿ ರವರೊಂದಿಗೆ ಮಾತನಾಡಲು ಖರೀದಿ ಮಾಡಿ ಬಳಕೆ ಮಾಡಿ ಸಾಕ್ಷ ನಾಶಪಡಿಸಲು ಕೃತ್ಯಕ್ಕೆ ಉಪಯೋಗಿಸಿದ್ದ ಬಾಕ್ಲ್ ಜೋನ್ ಕಂಪನಿಯ ಕೀ ಪ್ಯಾಡ್ ಸೆಟ್ ಮತ್ತು ಅದರಲ್ಲಿ ಇದ್ದ 8792157828 ಸಂಖ್ಯೆಯ ಸಿಮ್ ನ್ನು ಮುರಿದು ಹಾಕಿ ನಾಶಪಡಿಸಿರುವುದಾಗಿ , ಅದನ್ನು ಬಿಸಾಡಿದ ಸ್ಥಳವನ್ನು ತೋರಿಸುವುದಾಗಿ ಪಕ್ಕದಲ್ಲಿ

PW: 25 CW: 34

ಇರುವ ಜಮೀನನ್ನು ತೋರಿಸಿರುತ್ತಾರೆ. ಅಲ್ಲಿ ಹುಡುಕಲಾಗಿ ಅವು ದೊರೆತಿರುವುದಿಲ್ಲ. ಸದರಿ ಪಂಚನಾಮೆಯನ್ನು ಮ. 2.10 ರಿಂದ 3.20 ರವರೆಗೆ ಮಾಡಲಾಯಿತು. ಸದರಿ ಪಂಚನಾಮೆಯನ್ನು ನಿಪಿ - 17 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ - 17 ( ಸಿ ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಆರೋಪಿ ಬ್ಲಾಕ್ ಜೋನ್ ಕಂಪನಿಯ ಮೊಬೈಲ್ ನ ಖಾಲಿ ಬಾಕ್ಸ್ ಹಾಜರುಪಡಿಸಿರುತ್ತಾರೆ ಅದನ್ನು ವಶಕ್ಕೆ ಪಡೆದಿರುತ್ತೇವೆ. ಸದರಿ ಖಾಲಿ ಬ್ಲಾಕ್ ನ್ನು ಈಗಾಗಲೇ ಎಂ.ಒ - 9 ಎಂದು ಗುರುತಿಸಲಾಗಿದೆ. ಸದರಿ ಬೈಕ್ ನ್ನು ಸಾಕ್ಷಿ ನಿಪಿ -21 ಪೊಟೋದಲ್ಲಿ ನೋಡಿ ಗುರುತಿಸಿರುತ್ತಾರೆ.

4) ಚಾಸಾ - 40 ರವರು ಎರಡು ಮತ್ತು ಮೂರನೇ ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಮೊಬೈಲ್ ಮತ್ತು ದ್ವಿಚಕ್ರ ವಾಹನವನ್ನು ಹಾಜರುಪಡಿಸುವುದಾಗಿ ನುಡಿದಿದ್ದ ಕಾರಣ ಪಂಚರಾದ ಚಾಸಾ -19 ಮತ್ತು 20 ರವರ ಸಮಕ್ಷಮ ಮೊಬೈಲ್ ಮತ್ತು ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿದ್ದು ಸದರಿ ಪಂಚನಾಮೆಯನ್ನು ಠಾಣೆಯ ಗಣಕಯಂತ್ರದಲ್ಲಿ ಟೈಪ್ ಮಾಡಲಾಗಿತ್ತು. ಸದರಿ ಪಂಚನಾಮೆ ಕಾಲದಲ್ಲಿ 2 ನೇ ಆರೋಪಿ ಕೃಷ್ಣಮೂರ್ತಿ ರವರು 1 ನೇ ಆರೊೀಪಿ ನವೀನ್ ಕುಮಾರ್ ರವರ ಜೊತೆ ಮಾತನಾಡಲು ಕೃತ್ಯಕ್ಕೆ ಉಪಯೊೀಗಿಸಿದ್ದ ನೀಲಿ ಬಣ್ಣದ ಸ್ಯಾಮ್ ಸಾಂಗ್ ಟಚ್ ಸ್ಕ್ರಿನ್ ಮೊಬೈಲ್ ಮತ್ತು ಅದರಲ್ಲಿ ಇದ್ದ 9845599024 ಸಂಖ್ಯೆಯ ಏರ್ ಟೆಲ್ ಸಿಮ್ ನ್ನು ಮತು ್ತ ಆರೋಪಿ ಅನಿಲ್ ಕುಮಾರ್ ರವರು ಹಾಜರುಪಡಿಸಿದ ನೊಕೀಯಾ ಕಂಪನಿಯ ಕೀ ಪ್ಯಾಡ್ ಸೆಟ್ ಮತ್ತು ಅದರಲ್ಲಿ ಇದ್ದ 8197581313 ಸಂಖ್ಯೆಯ ಏರ್ ಟೆಲ್ ಸಿಮ್ ನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದಿರುತ್ತೇವೆ. ನಂತರ 2 ನೇ ಆರೋಪಿ ಕೃಷ್ಣಮೂರ್ತಿ ನವೀನ್ ರವರನ್ನು ಕೊಲೆ ಮಾಡಲು ಉಪಯೋಗಿಸಿದ್ದ ದ್ವಿಚಕ್ರ ವಾಹನ ಠಾಣೆಯ ಆವರಣದಲ್ಲಿ ಇರುವುದಾಗಿ ನುಡಿದು ಹಾಜರುಪಡಿಸಿದ ಕೆಎ -03 - ಜೆವಿ -8813 ಹೊಂಡಾ ಎವಿಎಟರ್ ದ್ವಿಚಕ್ರ ವಾಹನವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು 6.10 ರಿಂದ 7.00 ಗಂಟೆವರೆಗೆ ಮಾಡಲಾಗಿತ್ತು, ಸದರಿ

ಪಂಚನಾಮೆಯನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ - 27 ( ಸಿ ) ಎಂದು ಗುರುತಿಸಲಾಯಿತು. ಸದರಿ ದ್ವಿಚಕ್ರ ವಾಹನವನ್ನು ಸಾಕ್ಷಿ ನಿಪಿ 33 ರಿಂದ 36 ಪೊಟೋಗಳಲ್ಲಿ ನೋಡಿ ಗುರುತಿಸಿರುತ್ತಾರೆ.

5) ಅದೇ ದಿನ 1 ರಿಂದ 3 ನೇ ಆರೋಪಿಗಳು ಅಟಂೆಡರ್ ನವೀನ್ ರವರನ್ನು 2 ನೇ ಆರೋಪಿಗೆ ತೋರಿಸಿದ ಸ್ಥಳವನ್ನು ಮತ್ತು 2 ಮತ್ತು 3 ನೇ ಆರೋಪಿಗಳು ನವೀನ್ ರವರನ್ನು ಕೊಲೆ ಮಾಡಿರುವ ಸ್ಥಳವನ್ನು ತೋರಿಸುವುದಾಗಿ ನುಡಿದಂತೆ ತನಿಖಾಧಿಕಾರಿಗಳು ಪಂಚರಾದ ಚಾಸಾ -19 ಮತ್ತು 20 ರವರನ್ನು ಮತ್ತು ನನ್ನನ್ನು ಕೆಎ -40 - ಜಿ - 538 ಜೀಪ್ ವಾಹನದಲ್ಲಿ ಆರೋಪಿಗಳು ತಿಳಿಸಿದಂತೆ ಪ್ರಶಾಂತ್ ನಗರದ ಪ್ರಕೃತಿ ವಿದ್ಯಾನಿಕೇತನ್ ಸ್ಥಳಕ್ಕೆ ಹೋಗಿ ಆರೋಪಿ 1 ನವೀನ್ ರವರು ತೋರಿಸಿದ ಸ್ಥಳದಲ್ಲಿ ಮತ್ತು ಆರೋಪಿ 2 ಮತ್ತು 3 ನೇ ಆರೋೀಪಿಗಳು ಅಟೆಂಡರ್ ನವೀನ್ ನ್ನು ಕೊಲೆ ಮಾಡಿದ ಸ್ಥಳವನ್ನು ತೋರಿಸಿದಂತೆ ಅಲ್ಲಿ ಪಂಚನಾಮೆ ಜರುಗಿಸಿರುತ್ತೇವೆ. ಸದರಿ ಪಂಚನಾಮೆಯ ಸಮಯದಲ್ಲಿ ಮನೆ ಮಾಲೀಕರಾದ ಚಾಸಾ -6 ರವರು ಹಾಜರಿದ್ದರು. ಸದರಿ ಪಂಚನಾಮೆಯಲ್ಲಿ ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ಜೀಪ್ ನಲ್ಲಿ ಇದ್ದ ಪ್ರಿಂಟರ್ ನಿಂದ ಪ್ರಿಂಟ್ ತೆಗೆದಿರುತ್ತೇವೆ. ಸದರಿ ಪಂಚನಾಮೆಯನ್ನು ಸಂಜೆ 7.15 ರಿಂದ 8.00 ಗಂಟೆ ಸಮಯದಲ್ಲಿ ಮಾಡಲಾಯಿತು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ -28 ಎಂದು ಗುರುತಿಸಲಾಗಿದೆ.

6) ನಂತರ 1 ನೇ ಆರೋಪಿ ಮುಂದುವರೆದು ನಾನು ನ್ಯಾಯಾಲಯದ ಅಟೆಂಡರ್ ನವೀನ್ ನನ್ನು ಕೊಲೆ ಮಾಡಿಸಲು 2 ನೇ ಆರೋಪಿ ಕೃಷ್ಣಮೂರ್ತಿಗೆ ಮಾತನಾಡಲು ಖರೀದಿ ಮಾಡಿದ್ದ ಬ್ಲಾಕ್ ಜೋನ್ ಮೊಬೈಲ್ ಮತ್ತು ಸಿಮ್ 8792157828 ಸಿಮ್ ಖರೀದಿ ಮಾಡಿದ್ದ ಪ್ರಸನ್ನ ಮೊಬೈಲ್ ಸೆಲ್ಸ್ ಅಂಡ್ ಸರ್ವೀಸ್ ಅಂಗಡಿಯನ್ನು ತೋರಿಸುವುದಾಗಿ ನುಡಿದಿದ್ದಂತೆ ತನಿಖಾಧಿಕಾರಿಗಳು ಪಂಚರಾದ ಚಾಸಾ - 19 ಮತ್ತು 20 ರವರನ್ನು ಮತ್ತು ನನ್ನನ್ನು ಅದೇ ಜೀಪ್ ನಲ್ಲಿ ಆರೊಪಿ ತಿಳಿಸಿದಂತೆ ಚಿಕ್ಕಬಳ್ಳಾಪುರದ ಎಂ. ಜಿ ರಸ್ತೆಯಲ್ಲಿರುವ ಪ್ರಸನ್ನ ಮೊಬೈಲ್ ಸೇಲ್ಸ್ ಅಂಡ್

PW: 25 CW: 34

ಸರ್ವೀಸ್ ಬಳಿಗೆ ಹೋ ಗಿ ಇದೇ ಅಂಗಡಿಯಲ್ಲಿ ನಾನು ಮೊಬೈಲ್ ಮತ್ತು ಸಿಮ್ ನ್ನು ಖರೀದಿ ಮಾಡಿರುವುದಾಗಿ ತಿಳಿಸಿದ್ದು , ಅಂಗಡಿ ಮಾಲೀಕರಾದ ಚಾಸಾ - 21 ಪ್ರಸನ್ನ ರವರು ಆರೋಪಿಯನ್ನು ಗುರುತಿಸಿ ಅಂಗಡಿಯಲ್ಲಿ ಬಿಲ್ ಬುಕ್ ನ್ನು ಪರಿಶೀಲಿಸಿ ದಿಃ 09.08.2020 ರಂದು ಬ್ಲಾಕ್ ಜೋನ್ ಕೀ ಪ್ಯಾಡ್ ಮೊಬೈಲ್ ಮತ್ತು ಸಿಮ್ ಖರೀದಿ ಮಾಡಿರುವುದಾಗಿ ನುಡಿದು , ಸದರಿ ಬಿಲ್ ನ ಕಾರ್ಬನ್ ಪ್ರತಿಯನ್ನು ತೋರಿಸಿದ್ದು , ಅದರ ಸಂಖ್ಯೆ 123 ಆಗಿರುತ್ತದೆ. ಆ ಸಮಯದಲ್ಲಿ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿರುತ್ತೇನೆ. ರಾತ್ರಿ 8.15 ರಿಂದ 9.00 ಗಂಟೆಯವರಗೆ ಪಂಚನಾಮೆ ಜರುಗಿಸಲಾಯಿತು. ಸದರಿ ಪಂಚನಾಮೆ ಈಗಾಗಲೇ ನಿಪಿ - 23 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಹಾಜರುಪಡಿಸಿದ ಬಿಲ್ ನ ಕಾರ್ಬನ್ ಪ್ರತಿಯನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಪೊಟೋಗಳನ್ನು ತೆಗೆಯಲಾಗಿ ಅದನ್ನು ನಿಪಿ -25 ಎಂದು ಗುರುತಿಸ ಲಾಗಿದೆ.

7) ದಿಃ 30.03.2021 ರಂದು ಚಾಸಾ -40 ರವರು ಆರೋಪಿ 1 ರಿಂದ 4 ರವರಿಂದ ಅಮಾನತ್ತು ಪಡಿಸಿಕೊಂಡ ಮೊಬೈಲ್ ಗಳ ಲ್ಲಿ ಅವರು ನಾಶಪಡಿಸಿರಬಹುದಾದ ವಾಟ್ಸ್ ಅಪ್ ಸಂದೇಶಗಳು , ಇಮೇಜ್ ಗಳನ್ನು ರೀಟ್ರೀಟ್ ಮಾಡಿಸಲು ಪಂಚರಾದ ಚಾಸಾ - 41 ಮತ್ತು 42 ರವರ ಸಮಕ್ಷ ಮ ಪಂಚನಾಮೆ ಕ್ರಮ ಜರುಗಿಸಿ ಮಾಡಿದ್ದ ಮೊಹರುಗಳನ್ನು ತೆಗೆಸಿ ಠಾಣೆಯ ಸಿಬ್ಬಂದಿಯಾದ ಅಶೋಕ್ ಮತ್ತು ಸರಸ್ವತಮ್ಮ ರವರ ಜೊತೆ ಅದನ್ನು ರೀಟ್ರೀಟ್ ಮಾಡಿಸಲು ಸಿಇ ಎನ್ ಪೊಲೀಸ್ ಠಾಣೆಗೆ ಕೊಟ್ಟಿದ್ದರು. ತಾಂತ್ರಿಕ ಕಾರಣದಿಂದ ರೀಟ್ರೀಟ್ ಮಾಡಿಸಲು ಅಗಲಿಲ್ಲ. ಆದ ಕಾರಣ ಅದೇ ಪಂಚರ ಸಮಕ್ಷಮ ಅವುಗಳನ್ನು ಪುನಃ ಬಟ್ಟೆಯಲ್ಲಿ ಸುತ್ತಿ ದಾರಿದಿಂದ ಕಟ್ಟಿ ಸಿ ಎಂಬ ಅಕ್ಷರದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು ಸದರಿ ಠಾಣೆಯ ಗಣಕಯಂತ್ರದಲ್ಲಿ ಬೆ. 10.00 ರಿಂದ 11.15 ರವರೆಗೆ ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುತ್ತೇನೆ.

PW: 25 CW: 34

**8)** ದಿಃ 25.06.2021 ರಂದು ಮೃತ ನವೀನ್ ಪಿ. ಎಂ ಜರುಗಿಸಿದ್ದ ವೈದ್ಯಾಧಿಕಾರಿಗಳು ಚಾಸಾ - 35 ರವರು ಮೃತನ ಸಾವಿನ ಬಗ್ಗೆ ಸ್ಪಷ್ಟ ಕಾರಣ ನೀಡಲು ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ್ದ ಬೆಲ್ಟ್‌ನ್ನು ನುಡಿದಿದ್ದರಿಂದ ಚಾಸಾ -40 ರವರು ನ್ಯಾಯಾಲಯದ ಪ್ರಾಪರ್ಟಿ ರೂಮ್ ನಲ್ಲ್ ಇದ್ದ ಪ್ರಾಪರ್ಟಿ ಗುಮಾಸ್ತರಾದ ಸುಕುಮಾರ್ ರವರು ಹಾಜರು ಪಡಿಸಿದ ಬೆಲ್ಟ್ ನ್ನು ಪಂಚರಾದ ಅಧಿಕ ದೋಷಾರೋಪಣಾ ಪಟ್ಟಿಯ ಚಾಸಾ -2 ಮತ್ತು 3 ರವರ ಸಮಕ್ಷ ಮ ಪಂಚನಾಮೆ ಮೂಲಕ ಮೊಹರು ಮಾಡಿದ ಬಟ್ಟೆ ಚೀಲವನ್ನು ತೆಗೆಸಿ ವೈದ್ಯರಾದ ಚಾಸಾ - 35 ರವರು ಬೆಲ್ಟ್ ನ್ನು ಪರಿಶೀಲನೆ ಮಾಡಿದ ನಂತ ರಅದೇ ಬ್ಯಾಗ್ ನಲ್ಲಿ ಇಟ್ಟು ದಾರದಿಂದ ಹೊಲಿದು ಸಿ ಎಂಬ ಅಕ್ಷರದಿಂದ ಸೀಲು ಮಾಡಲಾಯಿತು. ಸದರಿ ಮಹಜರ್ ನ್ನು ನನ್ನ ಬರವಣಿಗೆಯಲ್ಲಿ ಮ. 12.10 ರಿಂದ 1.00 ಗಂಟೆಗೆ ವರೆಗೆ ಬರೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ - 7 ಎಂದು ಗುರುತಿಸಲಾಗಿದೆ.

9) ದಿಃ 09.09.2020 ರಂದು ಮೃತನ ನವೀನ್ ನ ಶವದ ಬಳಿ ದೊರೆತ ಮೊಬೈಲ್ ಗಳನ್ನು ರೀಟ್ರೀಟ್ ಮಾಡಿಸಲು ಬೆಂಗಳೂರಿನ ಸೈಬರ್ ಕ್ರೈಂಮ್ ಠಾಣೆಗೆ ಕಳುಹಿಸಿ ಅದನ್ನು ವಾಪಸ್ಸು ಪಡೆದು ಬಂದಾಗ ಠಾಣೆಯಲ್ಲಿ ಮಹಜರು ಮಾಡಿ ಸಿಲ್ ಮಾಡಿರುತ್ತೇವೆ. ಸದರಿ ಮಹಜರನ್ನು ಈಗಾಗಲೇ ನಿಪಿ -8 ಎಂದು ಗುರುತಿಸಲಾಗಿದೆ , ಸಾಕ್ಷಿಯ ಸಹಿಯನ್ನು ನಿಪಿ -8 (ಡಿ ) ಎಂದು ಗುರುತಿಸಲಾಯಿತು, ಆರೋಪಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟೀಸವಾಲು : **ಶ್ರೀ.ಕೆ.** ಎನ್ ಎಂ . ವಕೀಲರಿಂದ**, 4** ನೇ ಆರೋಪಿ/ ತರ ಪರವಾಗಿಃ</u>

10) ನಾನು ಪೊಲೀಸ್ ಕೆಲಸಕ್ಕೆ ಸೇರಿ 17 ವರ್ಷಗಳಾಯಿತು. ಈ ಸಮಯದಲ್ಲಿ 7 ರಿಂದ 8 ಕೇಸುಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ. ನಾನು ಕೆಲಸ ಮಾಡುವ ಠಾಣೆಗಳಲ್ಲಿ ಎಲ್ಲಾ ಕೇಸುಗಳಲ್ಲಿ ನಾನು ಪ್ರಮುಖ ಸಾಕ್ಷಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೆರಳಚ್ಚು ಮಾಡಿದ ಬಗ್ಗೆ ಪ್ರಮಾಣಪತ್ರ ಇಲ್ಲ. ನನಗೆ ಬೆರಳಚ್ಚು ಮಾಡಲು ಬರುವುದಿಲ್ಲ ಎಂದರೆ

ಸರಿಯಲ್ಲ. ದಿಃ18.08.2020 ರ ಮಹಜರು ಬರೆದ ದಿನ ಯಾವ ದಿನ ಈಗ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಸೋಮವಾರ ಎನ್ನುತ್ತಾರೆ. ದಿಃ 09.09.2020 ರಂದು ಯಾವ ದಿನ ಎಂದು ಹೇಳಲು ಅಗುವುದಿಲ್ಲ. ದಿಃ 14.09.2020 ಸೋಮವಾರ ವಾಗಿತ್ತು. ನ್ಯಾಯಾಲಯಕ್ಕೆ ಬರುವ ಮೊದಲು ಕೇಸಿನ ಪೈಲ್ ನ್ನು ನೋಡಿಕೊಂಡಿದ್ದೆ ಎಂದರೆ ಸರಿ. ದಿಃ18.08.2020 ರಂದು ಕೋಣೆಗೆ ಪ್ರವೇಶ ಮಾಡಿದಾಗ ಸುಮಾರು 3.30 ಸಮಯವಾಗಿತ್ತು. ನಾವು ಹೋಗುವ ಮೊದಲು ಆ ಮನೆಯಲ್ಲಿ ಬೇರೆ ಯಾರಾದರೂ ಓಡಾಡಿದ್ದರೋ , ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಕೋಣೆಯ ಬಾಗಿಲನ್ನು ಯಾರು ತೆಗೆದರು ನನಗೆ ಗೊತ್ತಿಲ್ಲ. ನಾವು ಹೋಗುವ ಮೊದಲೇ ತೆಗೆದಿದ್ದರು. ಆ ಸಮಯದಲ್ಲಿ ಪೊಲೀಸರು ಮಹಜರ್ ಸಾಕ್ಷಿದಾರರು , ಪಂಚರು , ಪಿರ್ಯಾದಿದಾರರು , ಪೊಟೋ ತೆಗೆದ ಸಿಬ್ಬಂದಿ ಇದ್ದರು. ಸದರಿ ಮಹಜರ್ ನ್ನು ಕೊಣೆ ಪಕ್ಕದ ವರಂಡದಲ್ಲಿ ಬರೆಯಲಾಯಿತು. ಚಾಸಾ -39 ಮತ್ತು ಪಂಚರು ಹೇಳಿದಂತೆ ಮಹಜರ್ ನ್ನು ಬರೆಯಲಾಯಿತು.

11) ಮೊಬೈಲ್ ಸಿಮ್ ಗಳನ್ನು ನೋಡಿದರೆ ಅವುಗಳ ನಂಬರು ಗೊತ್ತಾಗುವುದಿಲ್ಲ. ಸಿಮ್ ಗಳ ನಂಬರು ಮೊಬೈಲ್ ನಿಂದ ಕಾಲ್ ಮಾಡಿದಾಗ ಗೊತ್ತಾಯಿತು. ಟಚ್ ಸ್ಕೀನ್ ಮೊಬೈಲ್ ಓಪನ್ ಆಗಲಿಲ್ಲ. ಟಚ್ ಸ್ಕೀನ್ ಮೊಬೈಲ್ ಎಂ.ಐ ಕಂಪನಿಯ ಮೊಬೈಲ್. ಮೊಬೈಲ್ ಓಪನ್ ಆಗದೇ ಇದ್ದರೆ ಸಿಮ್ ನಂಬರು ತಿಳಿದುಕೊಳ್ಳಲು ಆಗುವುದಿಲ್ಲ ಎಂದರೆ ಸರಿ. ಸೀಲು ಮಾಡಿದ ಮೊಹರಿನ ಬಳಿ ನಾನು ಸಹಿ ಮಾಡಲಿಲ್ಲ. ಮೃತದೇಹದ ಬಳಿ ಇದ್ದ ಪ್ಲಾಸ್ಟಿಕ್ ಕವರಿಗೂ , ಮೃತದೇಹಕ್ಕೂ ಸುಮಾರು ಒಂದು ಅಡಿ ಒಳಗೆ ಇತ್ತು. ಅದು ಬಿಳಿ ಬಣ್ಣದ ಪ್ಲಾಸ್ಟಿಕ್ ಕವರ್ ಅಗಿದ್ದು , ಅದಕ್ಕೆ ರಕ್ತ ಕಲೆಯಾಗಿತ್ತು. ಅಲ್ಲಿ ರಕ್ತ ಹರಿದ ನಿಶಾನೆ ಕಂಡುಬರಲಿಲ್ಲ.

12) ಕಟ್ಟಿಗೇನಹಳ್ಳಿಯಲ್ಲಿ ಮಹಜರ್ ನ್ನು ನಾನೇ ಬೆರಳಚ್ಚು ಮಾಡಿರುತ್ತೇನೆ. ಅದನ್ನು ಆರೋಪಿ ನವೀನ್ ವಾಸ ಇದ್ದ ಮನೆಯಲ್ಲಿ ಬೆರಳಚ್ಚು ಮಾಡಿರುತ್ತೇನೆ. ಅದಕ್ಕೆ ಚಾಸಾ -

40 ಮತ್ತು ಪಂಚರು ಉಕ್ತಲೇಖನ ನೀಡಿದ್ದರು. ಪ್ರಿಂಟರ್ ನ್ನು ನಾವೇ ತೆಗೆದುಕೊಂಡು ಹೋಗಿದ್ದೆವು , ಅವರ ಮನೆಯಲ್ಲಿ ಪ್ರಿಂಟ್ ತೆಗೆದೆವು. ಬರೆಯಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ತನಿಖಾಧಿಕಾರಿಗಳು ಬೆರಳಚ್ಚು ಮಾಡಿ ಎಂದು ಹೇಳಿದ ಕಾರಣ ಬೆರಳಚ್ಚು ಮಾಡಿರುತ್ತೇನೆ ಎಂದು ಹೇಳುತ್ತಾರೆ. ಅಲ್ಲಿ ಪಂಚರು, ತನಿಖಾಧಿಕಾರಿಗಳು , ಸಿಬ್ಬಂದಿಗಳು ಮಾತ್ರ ಇದ್ದೆವು. ಮೊಹರಿನ ಬಳಿ ನನ್ನ ಸಹಿ ಪಡೆಯಲಿಲ್ಲ. ಮಹಜರ್ ನಲ್ಲಿ ಪ್ರಿಂಟರ್ ನ್ನು ಜೊತೆಗೆ ತೆಗೆದುಕೊಂಡು ಹೋಗಿದ್ದೆವು ಎನ್ನುವ ಷರಾ ಇಲ್ಲ ಎಂದರೆ ಸರಿಯಲ್ಲ. ಮಹಜರ್ ಮುಗಿದಾಗ ಮ. 3.20 ಆಗಿತ್ತು. ಪೊಲೀಸ್ ಸಿಬ್ಬಂದಿಗಳು ಒಟ್ಟು 7 ಜನ ಮತ್ತು ಇಬ್ಬರು ಜೀಪ್ ಡ್ರೈವರ್ ಗಳು ಇದ್ದೆವು. ಅಲ್ಲಿಂದ ಉಳಿದ ಆರೋಪಿಗಳ ಪತ್ತೆಗಾಗಿ ಚಾಸಾ -39 ಮತ್ತು 3 ಜನ ಸಿಬ್ಬಂದಿಗಳನ್ನು ಕಳುಹಿಸಿದ್ದರು. ಉಳಿದವರು ನೇರವಾಗಿ ಠಾಣೆಗೆ ಬಂದೆವು.

ಮುಂದುವರೆದು ಪಾಟೀ ಸವಾಲಿಗೆ ನ್ಯಾಯಾಲಯದ ಸಮಯ ಮುಗಿದ ಕಾರಣ ಮದ್ಯಾಹ್ನನಕ್ಕೆ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 14.10.2022 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

ಸಾಕ್ಷಿಯನ್ನು ಮಧ್ಯಾಹ್ನದ ಅವಧಿಗೆ ಪುನಃ ಕರೆಸಿ ಸತ್ಯ ಭೋದನೆ ಮಾಡಿಸಲಾಯಿತು.

ಮುಂದುವರೆದ ಪಾಟೀಸವಾಲು : ಶ್ರೀ.ಕೆ. ಎನ್.ಎಂ . ವಕೀಲರಿಂದ, **4** ನೇ ಆರೋಪಿ/ ತರ ಪರವಾಗಿಃ

13) ಸದರಿ ಮನೆಯ ಹಿಂಭಾಗದಲ್ಲಿ ಇದ್ದ ಜಮೀನು ಬೀಳು ಜಮೀನು. ಅದು ಜನರು ಓಡಾಡುವ ಜಾಗ. ನಾವು ಕಟ್ಟಿಗೆನಹಳ್ಳಿಗೆ ಹೋಗಿರಲಿಲ್ಲ , ಯಾವುದೇ ಮಹಜರು ಮಾಡಿರಲಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಠಾಣೆಯಲ್ಲಿ ಈ ಕೇಸಿಗಾಗಿ ಬನಾವಟ್ಟು ಮಾಡಿದ್ದೇವೆ ಎಂದರೆ ಸರಿಯಲ್ಲ.

14) ಚಾಸಾ -21 ರವರ ಮೊಬೈಲ್ ಅಂಗಡಿ ಜನ ನಿಬಿಡ ಪ್ರದೇಶದಲ್ಲಿ ಇದೆ ಎಂದರೆ ಸರಿ. ಸದರಿ ಅಂಗಡಿಗೆ ಅಕ್ಕಪಕ್ಕ ಬೇರೆ ಅಂಗಡಿಗಳು ಇವೆ ಎಂದರೆ ಸರಿ. ಪಕ್ಕದ ಅಂಗಡಿಯವರನ್ನು ಸಾಕ್ಷಿಯಾಗಿ ಕರೆಸಲಿಲ್ಲ. ಸದರಿ ಮಹಜರ್ ನ್ನು ಲ್ಯಾಪ್‌ಟಾಪ್ ನಲ್ಲಿ ಬೆರಳಚ್ಚು ಮಾಡಲಾಯಿತು. ಅದೇ ಸ್ಥಳದಲ್ಲಿ ಪ್ರಿಂಟ್ ತೆಗೆದೆವು. ಸದರಿ ಅಂಗಡಿಯಲ್ಲಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆಯಲಿಲ್ಲ. ಚಾಸಾ -21 ರವರ ಮನೆಗೆ ನಾವು ಹೋಗಿರಲಿಲ್ಲ , ಯಾವುದೇ ಮಹಜರು ಮಾಡಿಲ್ಲ ಅದನ್ನು ಠಾಣೆಯಲ್ಲಿ ಬನಾವಟ್ಟು ಮಾಡಿದೇವೆ ಎಂದರೆ ಸರಿಯಲ್ಲ.

15) ದಿಃ 09.09.2020 ರಂದು ಮಹಜರ್ ನ್ನು ಸರ್ಕಲ್ ಇನ್ಸ್ ಪೆಕ್ಟರ್ ಕಚೇರಿಯಲ್ಲಿ ಬೆರಳಚ್ಚು ಮಾಡಿರುತ್ತೇವೆ. ಅ ಸಮಯದಲ್ಲಿ ಸೀಲ್ ಮಾಡಿದ ಮೊಬೈಲ್ ನ್ನು ಎರಡನೇ ಬಾರಿಗೆ ನೋಡಿದೆ. ಮೊಹರಿನ ಮೇಲೆ ನಾನು ಸಹಿ ಮಾಡಲಿಲ್ಲ.

16) ನ್ಯಾಯಾಲಯದಲ್ಲಿ ಮಾಡಿದ ಮಹಜರ್ ನಲ್ಲಿ ನಾನು ಸಹಿ ಮಾಡಲಿಲ್ಲ. ಯಾವುದೇ ಮಹಜರ್ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಮಹಜರ್ ಗಳನ್ನು ಈ ಕೇಸಿಗಾಗಿ ಬನಾವಟ್ಟು ಮಾಡಿದ್ದೇವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾನು ಬುದ್ದಿವಂತ ಸಾಕ್ಷಿ ಎಂದು ಎಲ್ಲಾ ಮಹಜರ್ ಗಳಲ್ಲಿ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ

ಸರಿಯಲ್ಲ. ಆರೋಪಿಗಳಿಗೆ ತೊಂದರೆ ಅಗಲೀ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಹೆಚ್ . ಆರ್. ವಿ ವಕೀಲರಿಂದ 2 ನೇ ಆರೋಪಿ ಪರವಾಗಿ

17) ಆರೋಪಿಗಳ ಪತ್ತೆಗಾಗಿ ವಿಶೇಷವಾಗಿ ನೇಮಕ ಮಾಡಿದ್ದ ಸಿಬ್ಬಂದಿಗಳಲ್ಲಿ ನಾನು ಇರಲಿಲ್ಲ. ಗುರುಕುಲನಾಗೇನಹಳ್ಳಿಗೆ ನಾನು ಹೋಗಿರಲಿಲ್ಲ, ಬೇರೆ ಯಾರು ಹೋಗಿದ್ದಾರೆ ನನಗೆ ಗೊತ್ತಿಲ್ಲ. ಕಟ್ಟಿಗೇನಹಳ್ಳಿಯಲ್ಲಿ ಸುಮಾರು 1 ವರೆ ಗಂಟೆ ಇದ್ದೆವು. ಅಲ್ಲಿಂದ ನಾನು ಠಾಣೆಗೆ ವಾಪಸ್ಸು ಬಂದೆ. ಕಟ್ಟಿಗೇನಹಳ್ಳಿ ಮಹಜರ್ ಸಮಯದಲ್ಲಿ ಪೊಟೋಗಳನ್ನು ವಿಜಯ್ ಕುಮಾರ್ ತೆಗೆದರು. ಮಹಜರ್ ನಲ್ಲಿ ಪೊಟೋ ತೆಗೆದ ಬಗ್ಗೆ ನಮೂದು ಮಾಡಿಲ್ಲ. ಮಹಜರ್ ಗಳಿಗೆ ಸಾಕ್ಷಿಗಳು ಸಹಿ ಮಾಡುತ್ತಿದ್ದ ಪೊಟೋಗಳನ್ನು ಹಾಗೂ ಸ್ಥಳದಲ್ಲಿ ಪ್ರಿಂಟ್ ತೆಗೆದ ಬಗ್ಗೆ ಪೊಟೋಗಳನ್ನು ತೆಗೆಯಲಿಲ್ಲ. ಪ್ರಿಂಟರ್ ಗೆ ಆರೋಪಿ ನವೀನನ ಮನೆಯಲ್ಲಿ ಸಂಪರ್ಕ ಪಡೆದಿರುತ್ತೇವೆ. ನಿಪಿ - 19 ರಿಂದ 20 ಪೊಟೋಗಳನ್ನು ತೆಗೆದ ಅದರಲ್ಲಿ ಇರುವ ಇಬ್ಬರು ಪೊಲೀಸರಲ್ಲದೆ ಇತರೆ ಕೆಲವು ಪೊಲೀಸ್ ಸಿಬ್ಬಂದಿ ಇದ್ದರು , ಅದರೆ ಅವರು ಪೊಟೋದಲ್ಲಿ ಇರುವುದಿಲ್ಲ.

18) ಠಾಣೆಗೆ ಬಂದಾಗ ಸುಮಾರು 5 ಗಂಟೆಯಾಗಿತ್ತು. ನಾನು ಠಾಣೆಗೆ ಬಂದ ನಂತರ ಈ ಕೇಸಿನ ಆರೋಪಿಗಳು ಠಾಣೆಗೆ ಬಂದರು. ದಿಃ 14.09.2020 ರಂದು ಕಟ್ಟಿಗೇನಹಳ್ಳಿಯಲ್ಲಿ ಸೇರಿಸಿ ಒಟ್ಟು 4 ಪಂಚನಾಮೆ ಮಾಡಿರುತ್ತೇವೆ. ಒಂದು ಠಾಣೆಯಲ್ಲಿ , ಇನ್ನೊಂದು ಕೊಲೆ ಮಾಡಿದ್ದ ಸ್ಥಳದಲ್ಲಿ, ಮತ್ತೊಂದು ಪ್ರಸನ್ನ ಮೊಬೈಲ್ ಅಂಗಡಿಯಲ್ಲಿ ಮಾಡಿರುತ್ತೇವೆ. ಆರೋಪಿಗಳ ಸ್ವಯಿಚ್ಚೆ ಹೇಳಿಕೆಗಳನ್ನು ನನ್ನ ಮುಂದೆ ತೆಗೆದುಕೊಳ್ಳಲಿಲ್ಲ. ಠಾಣೆಯಲ್ಲಿ ಬೆರಳಚ್ಚು ಮಾಡುವಾಗ ಪೊಟೋ ತೆಗೆಯಲಿಲ್ಲ. ದಿಃ 14.09.2020 ರಂದು ಠಾಣೆಯಲ್ಲಿ ಮಹಜರ್ ಮಾಡಿದಾಗ ಮೊಬೈಲ್ ಗಳನ್ನು ಆರೋಪಿಗಳು ಹಾಜರುಪಡಿಸಿದರು. ಆಗ ಯಾವುದೇ ಪೊಟೋ ತೆಗೆಯಲಿಲ್ಲ. ಆ ಸಮಯದಲ್ಲಿ ನನ್ನ ಮೇಲಾಧಿಕಾರಿಗಳು ನವೀನ್ ಕುಮಾರ್ ನ ಮೊಬೈಲ್ ನಂಬರು ಪರಿಶೀಲನೆ ಮಾಡಿದರೋ , ಇಲ್ಲವೋ ನನಗೆ ಗೊತ್ತಿಲ್ಲ.

19) ದಿಃ 14.09.2020 ರಂದು ಮಾಡಿದ ಎಲ್ಲಾ ಮಹಜರ್ ಗಳನ್ನು ನಾನೇ ಬೆರಳಚ್ಚು ಮಾಡಿದ್ದೇನೆ ಎಂದರೆ ಸರಿ. ಅವುಗಳಿಗೆ ಸಹಿ ಮಾಡಲು ನನಗೆ ತೊಂದರೆ ಇರಲಿಲ್ಲ. ಕಟ್ಟಿಗೇನಹಳ್ಳಿಯಲ್ಲಿ ಮಾಡಿದ ಮಹಜರ್ ಗೆ ಸಹಿ ಮಾಡಿರುತ್ತೇನೆ. ನಿಪಿ -27 ಮಹಜರ್ ನಲ್ಲಿ ಎರಡನೇ ಪುಟದಲ್ಲಿ ಮೊಹರು ಮಾಡಿದ ಸಿ ಅಕ್ಷರದಲ್ಲಿ ತಿದ್ದು ಬರೆಯಲಾಗಿದ್ದು , ಅದಕ್ಕೆ ಸಹಿ ಮಾಡಲು ತೊಂದರೆ ಇರಲಿಲ್ಲ. ಚಾಸಾ - 30 ರವರು ಆರೋಪಿ ಪತ್ತೆಗಾಗಿ ನೇಮಕ ಗೊಂಡಿದ್ದು , ಅವರು ಆರೋಪಿ ಪತ್ತೆ ಮಾಡಿದ ನಂತರ 2 ನೇ ಆರೋಪಿಯ ದ್ವಿಚಕ್ರ ವಾಹನವನ್ನು ಠಾಣೆಗೆ ತಂದಿದ್ದರು. ಈ ವಿಚಾರವನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ.

20) ಮೃತ ನವೀನ್ ನ ಮನೆಗೆ ನಾವು ಹೋದಾಗ ಬೀಗ ಹಾಕಿತ್ತು , ಮನೆಯ ಮಾಲೀಕರು ಬೀಗ ತೆಗೆದರು. ಈ ವಿಚಾರವನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. ನಾನು ಯಾವುದೇ ಮಹಜರ್ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಗಣಕಯಂತ್ರದಲ್ಲಿ ಪರಿಣಿತನಾಗಿರುವ ಕಾರಣ ನನ್ನಿಂದ ಎಲ್ಲಾ ಮಹಜರ್ ಗಳನ್ನು ಬೆರಳಚ್ಚು ಮಾಡಿಸ್ದಿದಾರೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳು ಹೇಳಿದಂತೆ ಮಹಜರ್ ಗಳನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 14.10.2022 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW: 25 CW: 34